ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕೆ.ಆರ್.ನಗರ.

ಒ.ಎಸ್.ನಂ. 350/2014

ಪಿಡಬ್ಲ್ಯಾ-4

ಸಾಕ್ಷಿಯ ಹೆಸರು : ಸಿ.ಬಿ.ವೆಂಕಟೇಶ

ತಂದೆ/ಗಂಡನ ಹೆಸರು : ಲೇಟ್ ಪಾಪೇಗೌಡ @ ಸಿ.ಎಸ್.ಬೋರೇಗೌಡ

ವಯಸ್ಸು : 64

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಚಿಕ್ಕವಡ್ಡರಗುಡಿ ಗ್ರಾಮ.

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 09-11-2015

ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪ್ರತಿಜ್ಞಾ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ಈ ಎಲ್ಲಾ ಹೇಳಿಕೆಗಳು ನಾನು ನೀಡಿದ ಮಾಹಿತಿ ಪ್ರಕಾರ ಇದ್ದು ಅವು ಸತ್ಯವಾಗಿರುತ್ತವೆ ಅದನ್ನು ಓದಿ ನಾನು ಸಹಿ ಮಾಡಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಎಸ್ಎನ್ ರವರಿಂದಃ

ದಾವಾ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದರ ಬಗ್ಗೆ ನೊಂದಾಯಿತ ಖರೀದಿ ಪತ್ರದ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇನ್‌ಡೆಕ್ಸ್ ಆಫ್ ಲ್ಯಾಂಡ್ ಮತ್ತು ರೆಕಾರ್ಡ್ ಆಫ್ ರೈಟ್ಸ್‌ನ ಪ್ರತಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು, ನಮ್ಮ ಮನೆತನದ ವಂಶವೃಕ್ಷವನ್ನು ನಿಪಿ-4 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-5 ಮತ್ತು 6 ಎಂದು, ತಹಶೀಲ್ದಾರ್ ಇವರು ನನಗೆ ನೀಡಿರುವ ಹಿಂಬರಹದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕು ದಾಖಲೆ ನಂ.79/85-86ರ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲಾ ಅಂತಾ ತೆಗೆದುಕೊಳ್ಳಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ)

ಓ.ಹೇ.ಕೇ. ಸರಿ ಇದೆ,

(ರಮೇಶ್ ಎಸ್.ಗಾಣಿಗೇರ)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಕೆ.ಆರ್.ನಗರ